# ಡಾ. ಶಿವಾನಂದ ಶಾಂತಪ್ಪ ಗಾಳಿ ದತ್ತಿ



ಧಾರವಾಡ : ವಡ್ಡಾರಾಧನೆ ೧೯ ಕಥೆಗಳ ಒಂದು ಗುಚ್ಛ, ಇದೊಂದು ಮಹೋನ್ನತ ಕೃತಿಯಾಗಿದ್ದು, ಇದರಲ್ಲಿ ಬರುವ ಕಥೆಗಳು ತಮ್ಮ ಶಕ್ತಿ, ಸರಳತೆ, ದೇಶಿಯತೆಯ ಚೆಲುವಿನಿಂದ ಓದುಗರ ಗಮನ ಸೆಳೆಯುತ್ತವೆ ಎಂದು ಕಲಘಟಗಿ ಗುಡ್‌ನ್ಯೂಜ್ ಕಾಲೇಜಿನ ಪ್ರಾಚಾರ್ಯರಾದ ಡಾ. ಬಿ. ಜಿ. ಬಿರಾದಾರ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿ. ಡಾ. ಶಿವಾನಂದ ಶಾಂತಪ್ಪ ಗಾಳಿ ದತ್ತಿ ಅಂಗವಾಗಿ ದಿನಾಂಕ ೧೩-೨-೨೦೧೯ ರಂದು ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಡ್ಡಾರಾಧನೆಯ ಒಂದು ಅವಲೋಕನ' ವಿಷಯದ ಮೇಲೆ ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ವಡ್ಡಾರಾಧನೆಯ ಕಥೆಗಳಲ್ಲಿ ಜೀವ ತುಂಬಿದ ಶಿವಕೋಟ್ಯಾಚಾರ್ಯರು ಬೇರೆ ಬೇರೆ ರೀತಿಯಿಂದ ಕಥೆಗಳನ್ನು ಹೇಳಿದ್ದಾರೆ. ನೀತಿ, ಚರಿತ್ರೆ, ಧರ್ಮ, ವ್ಯವಹಾರ ಹೀಗೆ ಹಲವು ವಿಷಯಗಳು ಈ ಕಥೆಗಳಲ್ಲಿವೆ. ಧಾರ್ಮಿಕ ಉದ್ದೇಶದಿಂದ ರಚಿತವಾದ ಈ ಕೃತಿ ಹಳೆಗನ್ನಡದ ಉತ್ತಮ ಕೃತಿಯಾಗಿದೆ. ಇದು ಒಂದು ಅದ್ಭುತ ಗದ್ಯ ಕಾವ್ಯ. ಕೃತಿಯ ಗಾತ್ರದ ಮೇಲೆ ಕೃತಿಯನ್ನು ದೊಡ್ಡದು, ಸಣ್ಣದು ಎಂದು ವರ್ಗೀಕರಿಸಲು ಬರುವುದಿಲ್ಲ. ವಡ್ಡಾರಾಧನೆ ಒಂದು ಮಹೋನ್ನತ ಕೃತಿಯಾಗಿದೆ ಇದರಲ್ಲಿಯ ಕಥೆಗಳು ತಮ್ಮ ಶಕ್ತಿ, ಸರಳತೆ, ದೇಶಿಯತೆಯ ಚೆಲುವಿನಿಂದ ಓದುಗರ ಗಮನ ಸೆಳೆಯುತ್ತವೆ ಎಂದು, ಗಾಳಿಯವರ ಮನೆ ಆತಿಥ್ಯಕ್ಕೆ ಹೆಸರಾಗಿತ್ತು. ಎಲ್ಲರನ್ನೂ ಪ್ರೀತಿಯಿಂದ ಕಾಣುತ್ತಿದ್ದ ಗಾಳಿಯವರು ಅಜಾತ ಶತ್ರುವಾಗಿದ್ದರು. ಅವರು ಧಾರವಾಡ ಜಿಲ್ಲಾ ಕ.ಸಾ.ಪ ಅಧ್ಯಕ್ಷರಾಗಿ ನಾಲ್ಕು ಅವಧಿಗೆ ಆಯ್ಕೆಯಾಗಿ ಮರೆಯಲಾಗದ ಕಾರ್ಯ ಮಾಡಿದ್ದಾರೆ. ಅವರು ಸಾಹಿತ್ಯಿಕವಾಗಿ, ಸಾಂಸ್ಕೃತಿಕವಾಗಿ ಅಪಾರವಾಗಿ ಕಾರ್ಯಮಾಡಿ ತಮ್ಮದೆ ಆದ ಕೊಡುಗೆ ನೀಡಿದ್ದಾರೆ ಎಂದು ಗಾಳಿಯವರ ಜೊತೆಗಿನ ತಮ್ಮ ಒಡನಾಟವನ್ನು ಸ್ಮರಿಸಿಕೊಂಡರು.

ಧಾರವಾಡ ಕ.ವಿ.ವಿ.ಯ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾದ ಡಾ. ಜೆ.ಎಂ. ನಾಗಯ್ಯ ಅಧ್ಯಕ್ಷತೆ ವಹಿಸಿ ಮಾತನಾಡಿ, ವಡ್ಡಾರಾಧನೆ ೨೫೦೦ ಶ್ಲೋಕ ಒಳಗೊಂಡ ಮೂಲಾರಾಧನೆ, ಇದನ್ನು ಜನ ವಡ್ಡಾರಾಧನೆ ಎಂದು ಕರೆಯುತ್ತಾರೆ. ಇದರಲ್ಲಿ ಸುಕುಮಾರಸ್ವಾಮಿಯ ಕಥೆ, ಸುಕೌಶಳಸ್ವಾಮಿಯ ಕಥೆ, ಗಜಕುಮಾರನ ಕಥೆ, ಸನತ್ಕುಮಾರ ಚಕ್ರವರ್ತಿಯ ಕಥೆ, ಭದ್ರಬಾಹು ಭಟ್ಟಾರರ ಕಥೆ, ಕಾರ್ತಿಕ ಋಷಿಯ ಕಥೆ ಸೇರಿದಂತೆ ೧೯ ಕಥೆಗಳಿದ್ದು ಇವು ಜೈನ ಧರ್ಮದ ಸಂಸ್ಕೃತಿ, ಪರಂಪರೆ ರೀತಿ, ರಿವಾಜು, ಆಚರಣೆಗಳನ್ನು ತಿಳಿಸಿಕೊಡುತ್ತವೆ. ಈ ಕಥೆಗಳಲ್ಲಿ ಬರುವ ನಾಯಕರು ಸಾಮಾನ್ಯರಲ್ಲ, ತಮ್ಮ ಪ್ರಪಂಚದಲ್ಲಿ ಬರುವ ಎಲ್ಲ ಕ್ಲೇಷಗಳನ್ನು ಕಳೆದುಕೊಂಡು ಇವರು ದೈವತ್ವಕ್ಕೆ ಏರಿದವರು, ಆದ್ದರಿಂದ ಇದು ಬೃಹತಾರಾಧನೆ ಎಂದು ಹೇಳುತ್ತಾರೆ. ವಡ್ಡಾರಾಧನೆ ಪಂಡಿತರಿಗಷ್ಟೇ ಅಲ್ಲದೇ ಪಾಮರರಿಗೂ ಸರಳವಾಗಿ ಅರ್ಥವಾಗುವ ಕೃತಿಯಾಗಿದೆ ಎಂದು ವಡ್ಡಾರಾಧನೆಯಲ್ಲಿ ಬರುವ ಕಥೆಗಳನ್ನು ಎಳೆ ಎಳೆಯಾಗಿ ವಿವರಿಸಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮದಲ್ಲಿ ದಿ. ಡಾ. ಶಿವಾನಂದ ಗಾಳಿಯವರ ಭಾವಚಿತ್ರಕ್ಕೆ ಪುಷ್ಪಾರ್ಪಣೆಯೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆ ಮೇಲೆ ದತ್ತಿದಾನಿ ಡಾ. ಜಿನದತ್ತ ಅ. ಹಡಗಲಿ ಹಾಗೂ ಶ್ರೀಮತಿ ಸುಜಾತಾ ಹಡಗಲಿ ದಂಪತಿಗಳು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಸೋನಾಲಿ ಗೋಗಿ ಪ್ರಾರ್ಥಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಸ್ವಾಗತಿಸಿದರು ಕೋಶಾಧ್ಯಕ್ಷರಾದ ಕೃಷ್ಣ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಪ್ರಫುಲ್ಲಾ ನಾಯಕ ನಿರೂಪಿಸಿದರು. ಶಾಂತೇಶ ಗಾಮನಗಟ್ಟಿ ವಂದಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ) ಕಾರ್ಯಾಧ್ಯಕ್ಷ ಶಿವಣ್ಣ ಬೆಲ್ಲದ, ಕಾ.ಕಾ. ಸಮಿತಿ ಸದಸ್ಯರಾದ ಸತೀಶ ತುರಮರಿ, ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಹಾಗೂ ಡಾ. ಲಿಂಗರಾಜ ಅಂಗಡಿ, ಡಾ. ಭಜಂತ್ರಿ, ಪ್ರೊ. ಎ.ಜಿ. ಸಬರದ, ವೀರಣ್ಣ ಒಡ್ಡೀನ, ಶ್ರೀನಿವಾಸ ವಾಡಪ್ಪಿ, ಬಸಲಿಂಗಯ್ಯ ಹಿರೇಮಠ, ಜಿ. ಬಿ. ಹೊಂಬಳ, ಎಂ. ವಾಯ್. ಸಿದ್ನಾಳ ಹಾಗೂ ಗಾಳಿ ಪರಿವಾರದವರು, ಅಭಿಮಾನಿಗಳು ಸೇರಿದಂತೆ ಅನೇಕರು ಭಾಗವಹಿಸಿದ್ದರು.

**ಕೃಷ್ಣ ಜೋಶಿ**
ಕೋಶಾಧ್ಯಕ್ಷರು
ಮೊ : ೯೮೮೦೮೬೧೩೨೦